



# ಸ್ವಾತಂತ್ರ್ಯ ಉತ್ಸವಕ್ಕೆ ಸಸ್ಯಲೋಕದ ನಮನ

■ ಚಿತ್ರ-ಲೇಖನ

**ಪುಟ್ಟರಾಜು ಕೈಗಾ**

ಸಸ್ಯ ಪ್ರಪಂಚ ತನ್ನ ಗರ್ಭದಲ್ಲಿ ನೂರಾರು ಅತ್ಯದ್ಭುತ, ಆಶ್ಚರ್ಯಕರ ಬಣ್ಣ, ವಿನ್ಯಾಸ, ಗುಣಗಳನ್ನು ಅಡಗಿಸಿಕೊಂಡಿದೆ. ನಮ್ಮೆಲ್ಲಾ ಅವಿಷ್ಕಾರಗಳಿಗೆ, ವೈಜ್ಞಾನಿಕ, ತಾಂತ್ರಿಕ ಅಭಿವೃದ್ಧಿಗೆ ಮತ್ತು ಸಂಶೋಧನೆಗೆ ಪ್ರೇರಣೆಯೇ ಈ ಪ್ರಕೃತಿಯ ಜೀವಜಾಲ!

ಎರಡು ವಾರಗಳಿಂದ ಪಶ್ಚಿಮ ಘಟ್ಟದಲ್ಲಿ ನಿಲ್ಲದೇ ಮಳೆ ಸುರಿಯುತ್ತಿತ್ತು. ಮಳೆ ಸ್ವಲ್ಪ ಕಡಿಮೆಯಾಗಲೆಂದು ನನ್ನ ಛತ್ರಿಗೆ ಮತ್ತು ನನಗೆ ಆಸರೆಯಾಗಿ ದೊಡ್ಡ ಮರದಡಿಯಲ್ಲಿ ನಿಂತು, ನೀರಾದ ಬಟ್ಟೆಯೊಂದಿಗೆ ಮುದುಡಿದ್ದ ನನಗೆ, ಅಲ್ಲೇ ಪಕ್ಕದಲ್ಲಿ ಬಣ್ಣಗಳ ಅಚ್ಚರಿಯೊಂದು ಕಾಣಿಸಿತು. ದಟ್ಟ ಹಸಿರ ರಾಶಿಯಲ್ಲಿ ಬಣ್ಣದ ಛತ್ರಿಯಂತೆ ಬಿಚ್ಚಿಕೊಂಡು ಅರಳಿದ್ದ ಕೇಸರಿ ಹೂವು; ಪಕ್ಕದಲ್ಲೇ ಎರಡು ಬಿಳಿಯ ಎಲೆಗಳ ಬೆಚ್ಚನೆಯ ಆವರಣ! ಅರೆ.. ಕೇಸರಿ, ಬಿಳಿ, ಹಸಿರು ತ್ರಿವರ್ಣ. ಪ್ರಕೃತಿಯೂ ಸ್ವಾತಂತ್ರ್ಯದ ಉತ್ಸವ ಆಚರಿಸುತ್ತಿದೆಯೆ?!

ಪ್ರತಿ ನಿತ್ಯ ಅದೇ ರಸ್ತೆಯಲ್ಲಿ ಅಡ್ಡಾಡುತ್ತಿದ್ದರೂ ನನ್ನ ಚಿಕಿತ್ಸಕ ಬುದ್ಧಿಗೆ ಈ ಕಾಕತಾಳೀಯ ಹೊಂದಾಣಿಕೆಯ ಐಡಿಯಾ ಜಾಗೃತವಾಗಿರಲಿಲ್ಲ. ಮತ್ತೆ ಮತ್ತೆ ನೋಡಿದೆ. ನಿತ್ಯ ಹರಿದ್ವರ್ಣದ ಕಾಡುಸಸ್ಯಗಳ ಈ ಸಿಂಗಾರದ ಹೂವಿನ, ಸ್ಥಳೀಯ ಹೆಸರು ಬೆಳ್ಳಂಟೆ ಸೊಪ್ಪು. ಸಸ್ಯಶಾಸ್ತ್ರೀಯ ಹೆಸರು ಮುಸ್ಸಂಡಾ ಬಳ್ಳಿ. ಕರಾವಳಿ, ಮಲೆನಾಡಿನ ರಸ್ತೆಯುದ್ದಕ್ಕೂ ಅರಳುವ ಈ ಪುಷ್ಪ ಕರ್ನಾಟಕದಾದ್ಯಂತ ಪಾರ್ಕಿನಲ್ಲಿ, ಸಸ್ಯ ಉದ್ಯಾನದಲ್ಲಿ ಕಂಡುಬಂದರೂ ಅವುಗಳ ಮುಖ್ಯ ಆವಾಸಸ್ಥಾನ ಈ ಪಶ್ಚಿಮ ಘಟ್ಟಗಳೇ.

ಜುಲೈಗಿಂತ ಹೆಚ್ಚಾಗಿ ಆಗಸ್ಟ್ ತಿಂಗಳ ಮಳೆಗಾಲದಲ್ಲಿಯೇ ಇಳೆಯಲ್ಲಿನ ಈ ಸಸ್ಯಗಳಲ್ಲಿ ಜೀವಕಳೆ ತುಂಬಿ ತುಳುಕುವುದು! ಆಗಸ್ಟ್ 15ರ ಉತ್ಸವಕ್ಕೆ ಮಳೆಯಲ್ಲಿಯೇ ಶಾಲಾ ಮಕ್ಕಳು ಸಂಭ್ರಮದ ಸಿದ್ಧತೆ ನಡೆಸುತ್ತಿದ್ದರೆ, ಸಸ್ಯ ಜಗತ್ತಿನ ಈ ಬೆಳ್ಳಂಟೆ ಕೂಡಾ ಸಿದ್ಧವಾಗಿದೆ.

ಹಾಗೆ ನೋಡುತ್ತಿದ್ದಂತೆಯೇ ಅಲ್ಲೊಂದು ಚಿಟ್ಟೆ. ರೆಕ್ಕೆಗಳ ಎರಡೂ ತುದಿಯಲ್ಲಿ ತೆಳುವಾದ ಕೇಸರಿ ಬಣ್ಣ, ನಡುವೆ ಬಿಳೀ ಬಣ್ಣ! ಹಸಿರು ಎಲೆಗಳ ಮೇಲೆ ಕುಳಿತದ್ದು ಕ್ಲಿಕ್ಕಿಸಿದರೆ ಮತ್ತೆ ಕೇಸರಿ, ಬಿಳಿ, ಹಸಿರು!

ಪ್ರಕೃತಿಯ ಪಾಠಶಾಲೆಯಲ್ಲಿ ದಿನನಿತ್ಯ ನಮ್ಮ ಕಣ್ಣೆದುರಿಗೇ ಇಂತಹ ಎಷ್ಟೋ ಸಂಗತಿಗಳು ನಡೆಯುತ್ತಿವೆ. ಆದರೆ ನಮ್ಮ ಗಮನ ಸೆಳೆಯುವುದು ಕೆಲವೇ ಕೆಲವು.



